### ನಗೆಯ ಹಾಯಿದೋಣಿ...

'ನಕ್ಕು ಕೆಟ್ಟವರಿಲ್ಲ' (ಏ. 03) ಹಾಸ್ಯ ಸಂಚಿಕೆಯ ಬರಹಗಳು ಖುಷಿಕೊಟ್ಟವು. ನಟ ಅಶ್ವಿನ್ ಅವರ 'ಕರು, ಕಂಡಕ್ಟರ್, ರಂಗಸ್ವಾಮಿ' ನಕ್ಕು ನಗಿಸಿತು. ಡುಂಡಿರಾಜ್ ಅವರ 'ಬಗೆ ಬಗೆಯ ಬೀಗ' ಬರಹ ಚೆನ್ನಾಗಿದೆ. 'ಎನಿತು ಬಣ್ಣಿಸಲಯ್ಯ ಬ್ಯಾನಿಯ ಬಗೆಯ' (ಸುಮಾ ರಮೇಶ್), 'ಬಾಡಿಗೆ ಮನೆ' (ಗುಂಡುರಾವ್ ದೇಸಾಯಿ) ನಮ್ಮದೇ ಅನುಭವ ಎನಿಸಿತು. 'ಮರೆಯಲಿ ಹ್ಯಾಂಗ' ಅನುಭವಗಳು ಕೂಡ ಮಂದಹಾಸ ಮೂಡಿಸಿದವು. ಸಂಚಿಕೆ ನಗೆಯ ಹಾಯಿದೋಣಿಯಂತಿತ್ತು.

—ಕಲ್ಪನಾ ಎಂ., ಬೆಂಗಳೂರು




### ನಗು

ನಂಬಿ ಕೆಟ್ಟವರಿಲ್ಲ; ಹಾಗೆಯೇ 'ನಕ್ಕು ಕೆಟ್ಟವರಿಲ್ಲ' (ಹೌದಲ್ಲ). ನಗದೆ ಕೆಟ್ಟರೆ ಕೆಡಲಿ!

—ಸಿಪಿಕೆ, ಮೈಸೂರು

### ಅಪ್ರಸ್ತುತವಾಗುವನೆ?

'ಆ ಒಂದು ಕ್ಷಣ' ( ಏ. 03 ವಸುಮತಿ ಉಡುಪ) ಕಥೆ ಓದಿ, ಗತಿಸಿದ ತಂದೆ ತಾಯಿಗಳ ನೆನಪಾಗಿ ರಾತ್ರಿಯಿಡೀ ನಿದ್ದೆ ಬಾರದೆ ಒದ್ದಾಡುವಂತಾಯಿತು. 'ಊಟ ತಿಂಡಿ ಕೊಡೋದು ಕಮ್ಮಿ ಮಾಡು. ಅವರಿಗೆ ಬೇಕಾದ್ದನ್ನ ಅವರು ಮಾಡ್ಕೊಳ್ಲಿ. ಕೈಗೆ ಕೆಲಸ ಇದ್ದರೆ ಮನಸ್ಸು ಬೇರೆ ದಿಕ್ಕಿಗೆ ಹರಿಯುತ್ತೆ' ಎಂಬ ನಳಿನಾಕ್ಷಿಯ ಗಂಡನ ಮಾತು, ವೇದಮ್ಮನೊಳಗೆ ಚೈತನ್ಯವನ್ನು ಉದ್ದೀಪಿಸುವ ಉದ್ದೇಶವಿರುವುದನ್ನು ಮೇಲ್ನೋಟಕ್ಕೆ ತೋರಿಸಿದರೂ ಅಗತ್ಯ ತೀರಿದೊಡನೆ ಮನುಷ್ಯನೊಬ್ಬ ಅಪ್ರಸ್ತುತವಾಗುವುದನ್ನು ಧ್ವನಿಸುತ್ತದೆ. ಹೆತ್ತ ಮಕ್ಕಳಲ್ಲೇ ಅಂತಃಕರಣ ಇಲ್ಲವಾಗುತ್ತಿರುವ ಈ ಕಾಲದಲ್ಲಿ ನೆರೆಹೊರೆಯವರೊಡನೆ ಅದನ್ನು ಬಯಸುವುದು ದುಬಾರಿ. ಆದರೆ ಮನುಷ್ಯನಾದ ಮೇಲೆ ಕೊಂಚವಾದರೂ ಉಪಕಾರ ಸ್ಮರಣೆ, ಪಾಪಪ್ರಜ್ಞೆ ಇರಬೇಕಲ್ಲವೇ?

— ರಾಘವೇಂದ್ರ ಮಯ್ಯ ಮದ್ದೂರು



### ಕಥೆಗಳ ಶಕ್ತಿ

ಜೀವನದ ರಹಸ್ಯಗಳನ್ನು ತುಂಬಿಕೊಂಡಿರುವ ವಸುಮತಿ ಅವರ ಕಥೆ, ಕಾದಂಬರಿಗಳಿಗೆ ಮನಸ್ಸಿನ ಭಾವನೆಗಳನ್ನು ಹೊರತೆಗೆಯುವ ಶಕ್ತಿಯಿದೆ ಎಂಬುದನ್ನು ಈ ಕಥೆ ಮತ್ತೆ ಸಾಬೀತುಪಡಿಸಿತು.

—ಪಲ್ಲವಿ ಎಸ್.

### ತೆರೆಮರೆಯ ಕಲಾವಿದರು

'ಉಳಿದಾವ ಸಾವಿತ್ರಮ್ಮನ ಸಾವಿರದ ಹಾಡು' (ಏ. 03, ಜಿ.ವಿ. ಆನಂದಮೂರ್ತಿ) ನಾಡಿನಲ್ಲಿರುವ ಅನೇಕ ತೆರೆಮರೆಯ ಕಲಾವಿದರ ಅನನ್ಯತೆಯ ಬದುಕಿನ ಕನ್ನಡಿ. ಇಂಥ ಪ್ರತಿಭಾವಂತರನ್ನು ಗುರುತಿಸಿ ಮುನ್ನೆಲೆಗೆ ತರುವ ಕಾರ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಬೇಕಿದೆ.

—ಕೆ.ಆರ್. ಜಯಲಕ್ಷ್ಮಿ, ಕಂಪಲಾಪುರ

### ಜನಮನದಲ್ಲಿ ಉಳಿಯಲಿ

ಸೋಬಾನೆ ಪದಗಳು, ಹಸೆ ಹಾಡು, ದಾಸಯ್ಯನ ಹಾಡುಗಳು, ತತ್ವಪದಗಳು, ಜನಪದ ಹಾಡುಗಳು, ಗಾದೆ ಮಾತುಗಳು, ಇವೆಲ್ಲ ಮುಂದಿನ ಪೀಳಿಗೆಗೆ ಸಿಗುವುದೋ ಇಲ್ಲವೋ ಎಂಬ ಆತಂಕವಿದೆ. ಸಾವಿತ್ರಮ್ಮನಂಥವರು ಜನಮನದಲ್ಲಿ ಉಳಿಯಲು ಅವರ ಸಂಗೀತವನ್ನು ವ್ಯಾಪಕವಾಗಿ ಬಳಸಿಕೊಳ್ಳುವುದೇ ದಾರಿ.

—ನಾಗರಾಜ್ ಬಿ.ವಿ.

### ಆಪ್ತ ಆಶಯ

'ಹೊಸ ಮರದಲಿ ಹೊಸ ಹೂವು ಯುಗಾದಿಯೆ ಒಲವು– ಚೆಲುವು' (ಏ. 03, ಮಹತಿ) ಸುಂದರ ಲೇಖನ. ಯುಗಾದಿಗೆ ಮರಗಿಡಗಳು ಹಸುರನುಟ್ಟು ಪ್ರಕೃತಿಯ ಅಂದವನ್ನು ಹೆಚ್ಚಿಸುವ ರೀತಿಯೇ ಅನನ್ಯ. ಪ್ರಕೃತಿಯಲ್ಲಿ ನಡೆಯುವ ಕೌತುಕ ಬದಲಾವಣೆಗಳು ನಮ್ಮ ಊಹೆಗೂ ನಿಲುಕದ ಸಂಗತಿ. ಲೇಖನದಲ್ಲಿನ ಯುಗಾದಿಯ ಆಶಯಗಳು ಆಪ್ತವೆನಿಸಿದವು.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

### ಬಹಳಷ್ಟು ಜನರ ಅನುಭವ

'ಆನ್‌ಲೈನ್ ಖರೀದಿಯ ಪೇಚಾಟ' (ಏ. 03, ಕಾವ್ಯ ಭಾರದ್ವಾಜ್) ಲೇಖನ ಬಹಳಷ್ಟು ಮಂದಿಗೆ ಅನುಭವಕ್ಕೆ ಬಂದಿರುತ್ತದೆ. ಗ್ರಾಹಕರ ಮನೋಭಾವ, ಅದರಲ್ಲೂ ಮಧ್ಯಮ ವರ್ಗ ಹಾಗೂ ಆನ್‌ಲೈನ್ ಮಾಧ್ಯಮದ ಬಿಡಲಾಗದ ನಂಟನ್ನು ವಿವರಿಸಿರುವ ಶೈಲಿ ನೈಜವಾಗಿದೆ.

—ಮುರಳಿ ರಾಮ್, ಅಬುದಾಬಿ

### ದಿನನಿತ್ಯದ ಸಂಗತಿ

ಇಂದಿನ ದಿನಗಳಲ್ಲಿ ನಿತ್ಯ ಕೇಳುವ, ನಡೆಯುವ ಸಂಗತಿಗಳಿವು. ಸರಳ, ಸುಂದರ ಬರಹ. ಇಂಥ ಲೇಖನಗಳು ಹೆಚ್ಚು ಮೂಡಿಬರಲಿ.

—ಗಾಯತ್ರಿ ಎಸ್.

### ಅದಮ್ಯ ಉತ್ಸಾಹ ತುಂಬಿದ ವಿಶೇಷಾಂಕ




'ಸುಧಾ ಯುಗಾದಿ ವಿಶೇಷಾಂಕ 2025' ಸುಂದರವಾಗಿ ಮೂಡಿಬಂದಿದೆ. ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಮೂರು ಪ್ರಬಂಧಗಳು ಚಿಂತನೆಗೆ ಹಚ್ಚುವಂಥವು. ಸದಾಶಿವ ಸೊರಟೂರು ಅವರ 'ನಿನ್ನೆ ಯಾರದ್ದೋ ಇಂದು ನನ್ನದು...' ಪ್ರಬಂಧ ಮೇಲ್ನೋಟಕ್ಕೆ ಯಾವುದೋ ವಸ್ತುಗಳ ಮೇಲಿನ ಸ್ವಾಮ್ಯತೆಯನ್ನು, ವ್ಯಾಮೋಹವನ್ನು ಧ್ವನಿಸುವಂತಿದ್ದರೂ, ಒಳಾರ್ಥದಲ್ಲಿ ನಮ್ಮ ಸಂಪರ್ಕಕ್ಕೆ ಬರುವ ಪ್ರತಿ ವಸ್ತುವಿನೊಡನೆಯೂ ಗೊತ್ತಿರದ ಆಪ್ತತೆ ಬೆಳೆದಿರುತ್ತದೆ ಎಂಬುದನ್ನು ಬಹಳ ಅಚ್ಚುಕಟ್ಟಾಗಿ ನಿರೂಪಿಸಿದೆ. ಹೋರಾಟದ ಕಥೆಗಳು... ಛಲದ ಜೊತೆ ತಾಳ್ಮೆ ಇದ್ದರೆ, ಯಶ ಸಾಧ್ಯ ಎಂಬುದನ್ನು ನಿರೂಪಿಸಿವೆ. ನಡೆದಷ್ಟೂ ಪಥಗಳು... ನಡಿಗೆಯ ಮೂಲಕ, ತಮ್ಮ ಹೃದಯವನ್ನೂ ವಿಶಾಲಗೊಳಿಸಿಕೊಂಡ ವ್ಯಕ್ತಿಗಳ ಕಥೆಗಳನ್ನು ಓದಿ ಹೆಮ್ಮೆ ಖುಷಿಯಾಯ್ತು. ಒಟ್ಟಿನಲ್ಲಿ ಇದೇ ಪ್ರಥಮ ಬಾರಿ ಕೊಂಡುಕೊಂಡ ಯುಗಾದಿ ವಿಶೇಷಾಂಕ ಓದುವ ಅದಮ್ಯ ಉತ್ಸಾಹವನ್ನು ಇಮ್ಮಡಿಗೊಳಿಸಿತು.

—ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in